
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ

ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ

## ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ

ಪೀಠಾರೋಹಣ

# ದಶಮಾನೋತ್ಸವ ಸ್ಮರಣ ಸಂಪುಟ



ಶ್ರೀ ಭಗವತ್ಪಾದ ಪ್ರಕಾಶನ (ರಿ.)
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ
ಮಠದೇವಳ, ಸಿರ್ಸಿ, ಉತ್ತರ ಕನ್ನಡ

# ಪೂಜ್ಯ ಶ್ರೀ ಶ್ರೀಗಳವರ ವೈದಿಕ ವಿದ್ಯಾಭಿಮಾನ

*-ವಿದ್ವಾನ್ ಎನ್. ರಂಗನಾಥ ಶರ್ಮಾ*

ಶ್ರೀಮದ್ಗಂಗಾಧರೇಂದ್ರಂ ಯತಿಪತಿಮಹಿತಂ ಸ್ವರ್ಣವಲ್ಲೀಮಠಸ್ಥಂ
ವೈದುಷ್ಯಂ ಧರ್ಮಮಾರ್ಗಂ ಶ್ರುತಿತತಿವಿಹಿತಂ ಶ್ರದ್ಧಯೋದ್ಧರ್ತುಮುತ್ಕಮ್ ।
ವಿದ್ವದ್ವರ್ಯಂ ಗಭೀರಾಸ್ವಪಿ ವಿವಿಧಕಲಾಸ್ವದ್ವಿತೀಯಾತ್ಮವಿದ್ಯಾ-
ಪ್ರಜ್ಞಾವೈಶದ್ಯಹೃದ್ಯಂ ಭಸಿತಸಿತತನುಂ ಭಕ್ತಿಪೂರ್ವಂ ನಮಾಮಃ ॥

ಪುಣ್ಯಭೂಮಿಯಾದ ಭಾರತದೇಶದಲ್ಲಿ ಲೋಕೋತ್ತರ ಗ್ರಂಥಗಳಾದ ವೇದಗಳೂ ವೇದೋಕ್ತಧರ್ಮಗಳೂ ನೆಲೆನಿಂತು ಅನಾದಿಕಾಲದಿಂದಲೂ ಮಾನವನಿಗೆ ಶ್ರೇಯೋಮಾರ್ಗವನ್ನು ತೋರಿಸುತ್ತಾ ಬಂದಿವೆ. ಸಂಸ್ಕಾರ-ಬಲದಿಂದ ಪ್ರಕೃತಿಸಹಜವಾದ ವಿಷಯಭೋಗಾಭಿಲಾಷೆಯೂ ಮಾನವಜಾತಿಗೆ ಗಂಟು-ಬಿದ್ದಿರುತ್ತದೆ. ಆದ್ದರಿಂದ ಅದನ್ನು ಅಲಕ್ಷಿಸದೆ ಪ್ರೇಯೋಮಾರ್ಗವನ್ನು ವೇದವು ಬೋಧಿಸಿದೆ. ಪ್ರೇಯಸ್ಸಂಪಾದನೆಗೆ ಅರ್ಥಕಾಮಗಳು ಮುಖ್ಯವಾದವು. ಅವೂ ಪುರುಷಾರ್ಥಗಳೇ. ಆದರೆ ಅವನ್ನು ಸಂಪಾದಿಸಿ ಸುಖಿಸುವುದು, ಧರ್ಮಮಾರ್ಗದಿಂದಲೇ ಆಗತಕ್ಕದ್ದೆಂದು ವೇದವು ವಿಧಿಸಿದೆ. 'ಧರ್ಮಾದರ್ಥಶ್ಚ ಕಾಮಶ್ಚ' ಎಂಬುದೇ ನಮ್ಮ ಧರ್ಮಗ್ರಂಥಗಳ ನಿಲುವು. ಈ ನಿಲುವು ಪ್ರವೃತ್ತಿಮಾರ್ಗಕ್ಕೆ ಸೇರಿದ್ದು. ಪ್ರವೃತ್ತಿನಿವೃತ್ತಿಮಾರ್ಗಗಳೆರಡನ್ನು ಬೋಧಿಸುವುದರಿಂದ ವೇದೋಕ್ತ-ಧರ್ಮಕ್ಕೆ ಪೂರ್ಣತೆ ಲಭಿಸಿದೆ. ಆದ್ದರಿಂದಲೇ ಮನುಮಹರ್ಷಿಯು

ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ ।
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ ॥

ಎಂದು ಧೀರವಾಣಿಯಿಂದ ಉದ್ಗರಿಸಿದ್ದಾನೆ.

ಕಾಲಮಹಿಮೆಯಿಂದ ಈ ಧರ್ಮಕ್ಕೆ ಬಾಧೆಯುಂಟಾದಾಗ ಶ್ರೀರಾಮ, ಶ್ರೀಕೃಷ್ಣ -ಮುಂತಾದ ಮಹಾತ್ಮರು ಅವತರಿಸಿ, ಧರ್ಮವನ್ನು ಸುಸ್ಥಿತಿಗೆ ತಂದಿರಿಸುತ್ತಾ

ಬಂದಿದ್ದಾರೆ. ಆ ಕಾಲದ ಧರ್ಮವಿರೋಧಿಗಳೆಂದರೆ ಬಲಾಢ್ಯರಾದ ರಾಜರು. ಪ್ರಜೆಗಳು ತಪ್ಪುದಾರಿಗೆ ಇಳಿದಾಗ ಅವರನ್ನು ದಂಡಿಸಬೇಕಾದವನು ರಾಜ. ರಾಜನೇ ತಪ್ಪುದಾರಿಗೆ ಇಳಿದಾಗ ಧರ್ಮವನ್ನುಳಿಸತಕ್ಕವರು ಯಾರು?

ಇದೆಲ್ಲ ಯುಗಾಂತರದ ವಿಷಯವಾಯಿತು. ಆಗ ರಾಜ್ಯದಲ್ಲಿ ಧರ್ಮರಕ್ಷಣೆಯು ಕ್ಷತ್ರಿಯರ ಹೊಣೆಯಾಗಿತ್ತು. 'ನಂದಾಂತಂ ಕ್ಷತ್ರಿಯಕುಲಂ' ಎಂಬ ವಚನದಂತೆ ಈ ಕಲಿಯುಗದಲ್ಲಿ ಕ್ಷತ್ರಿಯ ಕುಲವೇ ಅಳಿಸಿಹೋಯಿತು. ಬ್ರಾಹ್ಮಣರ ಮಾರ್ಗದರ್ಶನ ದಲ್ಲಿ ಕ್ಷತ್ರಿಯರು ಧರ್ಮವನ್ನು ರಕ್ಷಿಸುತ್ತಿದ್ದರು. ಕ್ಷತ್ರಿಯರು ಅಳಿದಾಗ ಮಾರ್ಗ-ದರ್ಶಕರಾಗಿದ್ದ ಬ್ರಾಹ್ಮಣರೂ ಕ್ರಮವಾಗಿ ತಪ್ಪುದಾರಿಗೆ ಇಳಿಯತೊಡಗಿದರು. ಅವರದು ಬುದ್ಧಿಬಲ, ಬಾಹುಬಲವಲ್ಲ. ಅಜ್ಞಾನದಿಂದಲೋ ಅಥವಾ ಗುಂಪುಕಟ್ಟಿ ಸ್ವಾರ್ಥವನ್ನು ಸಾಧಿಸುವುದಕ್ಕಾಗಿಯೇ ತಮಗೆ ತೋರಿದಂತೆ ಗ್ರಂಥಗಳನ್ನು ರಚಿಸಿ ಪ್ರಚಾರಮಾಡತೊಡಗಿದರು. ಹೊಸಮತಗಳು ಬಂದವು. ಸಂಪ್ರದಾಯಸಿದ್ಧವಾದ ವೇದಾರ್ಥವೂ ಧರ್ಮಸ್ವರೂಪವೂ ಮಾಸಿದವು. ಈ ಸಮಯದಲ್ಲಿ ಶ್ರೀ ಶಂಕರಭಗವತ್ಪಾದರು ಉದಿಸಿದರು. ಅನಾದಿಯಾಗಿ ಬಂದಿದ್ದ ಸಂಪ್ರದಾಯ ಸಿದ್ಧವಾದ ವೈದಿಕ ಧರ್ಮವನ್ನು ಉಳಿಸಿಬೆಳೆಸಲು ಸರ್ವಪ್ರಯತ್ನಗಳನ್ನು ಮಾಡಿದರು.

ಆಚಾರ್ಯರು ಪ್ರಸ್ಥಾನತ್ರಯಕ್ಕೆ ವಿಸ್ತಾರವಾದ ಭಾಷ್ಯಗಳನ್ನು ಪ್ರಕರಣಗ್ರಂಥಗಳನ್ನು ರಚಿಸಿ, ಭಾರತದ ಆದ್ಯಂತ ಸಂಚರಿಸಿ, ಅವೈದಿಕ ಮತಗಳನ್ನು ಖಂಡಿಸಿ ವೈದಿಕ ಸಿದ್ಧಾಂತದ ವಿಜಯಪತಾಕೆಯನ್ನು ಎಲ್ಲೆಲ್ಲಿಯೂ ಹಾರಿಸಿದರು. ಅವರ ತಪಃಶಕ್ತಿ, ಬುದ್ಧಿಶಕ್ತಿ, ಕರ್ತೃತ್ವ, ದೂರದರ್ಶಿತ್ವಗಳು ಅಸಾಧಾರಣವಾದವು; ಲೋಕೋತ್ತರ ವಾದವು. ಈ ವೈದಿಕ ಧರ್ಮವು ಶಾಶ್ವತವಾಗಿ ಉಳಿಯಬೇಕಾದರೆ, ಅವಿರತವಾಗಿ ಇದನ್ನು ಪಾಲಿಸುತ್ತ ಪ್ರಚಾರಮಾಡತಕ್ಕವರು ಬೇಕು. ಈ ಮಹಾಕಾರ್ಯವು ಗೃಹಸ್ಥರಿಂದ ಆಗತಕ್ಕದ್ದಲ್ಲ. ವಿರಕ್ತರಾದ ಸಂನ್ಯಾಸಿಗಳ ಒಂದು ಪರಂಪರೆಯೇ ಸ್ಥಾಪಿತವಾಗಬೇಕು. ಈ ಸಂನ್ಯಾಸಿಗಳು ಪರಿವ್ರಾಜಕರಾಗಿ ಅಲೆಯುತ್ತಿದ್ದರೆ, ಪರಂಪರೆಯಾಗಿ ಇದು ಮುಂದುವರಿಯುವುದಿಲ್ಲ'' ಇತ್ಯಾದಿಯಾಗಿ ಆಲೋಚಿಸಿ ಆ ಧೀಮಂತರು ಭರತಖಂಡದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ತಮ್ಮ ಶಿಷ್ಯರ ಮೂಲಕ ಈ ದೇಶದ ವಿಭಿನ್ನ ಪ್ರದೇಶಗಳಲ್ಲಿ ಹಲವಾರು ಅದ್ವೈತಮಠಗಳನ್ನು ಸ್ಥಾಪಿಸುವಂತೆ ಪ್ರೇರಿಸಿದರು. ಈ ಘನೋದ್ದೇಶದಿಂದ ಈ ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ ಹಲವಾರು ಮಠಗಳು ತಲೆಯೆತ್ತಿದವು. ವೈದಿಕ ಧರ್ಮರಕ್ಷಣೆಗಾಗಿ ಒಂದು ಕ್ರಾಂತಿಯೇ ನಡೆದುಹೋಯಿತು. ಈ ಎಲ್ಲ ಅದ್ವೈತ ಮಠಗಳಿಗೂ ಮೂಲಕಾರಣರಾದವರು ಶ್ರೀ ಶಂಕರಾಚಾರ್ಯರು. ಇಂದಿಗೆ ಸುಮಾರು 1300

ವರ್ಷಗಳ ಹಿಂದೆ ನಡೆದ ಒಂದು ಮಹಾಕ್ರಾಂತಿಯಿದು. ಹೀಗೆ ಧರ್ಮರಕ್ಷಣೆಗಾಗಿ ತನ್ನನ್ನು ಮೀಸಲಾಗಿಟ್ಟುಕೊಂಡು ಪರಂಪರೆಯಿಂದ ಬಂದ ಧರ್ಮಪೀಠಗಳಲ್ಲಿ ಈ ಸೋಂದಾ ಸ್ವರ್ಣವಲ್ಲೀ ಮಠವು ವಿಖ್ಯಾತವಾಗಿದೆ.

ಶ್ರೀಮಠದ ಪ್ರಥಮಾಚಾರ್ಯರು ಶ್ರೀ ವಿಶ್ವವಂದ್ಯಸರಸ್ವತಿಗಳೆಂದು ತಿಳಿದು-ಬರುತ್ತದೆ. ಈ ಗುರುಪರಂಪರೆಯಿಂದ ಬಂದ ಶ್ರೀ ಚಂದ್ರಶೇಖರ ಸರಸ್ವತೀ ಸ್ವಾಮಿಗಳವರಿಗೆ ಸೋದೆ ಸಂಸ್ಥಾನದ ರಾಜನಾದ ಅರಸಪ್ಪನಾಯಕನು ಈಗಿನ ಸ್ವರ್ಣವಲ್ಲೀ ಮಠವನ್ನು ಕಟ್ಟಿಸಿ ಅರ್ಪಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಈ ಗುರುಪರಂಪರೆಯಲ್ಲಿ ಬಂದ ಯತೀಶ್ವರರೆಲ್ಲರೂ ಮಹಾತಪಸ್ವಿಗಳೂ ವಿದ್ವಾಂಸರೂ ಧರ್ಮರಕ್ಷಣೆಯಲ್ಲಿ ನಿರತರೂ ಆಗಿದ್ದಾರೆ. ಅವರಲ್ಲಿ ಶ್ರೀ ವಿಶ್ವನಾಥ ಸರಸ್ವತಿಗಳ ಕರಕಮಲ ಸಂಜಾತರಾದ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ''ಸ್ವಾರಾಜ್ಯಸಿದ್ಧಿ'' ಎಂಬ ಒಂದು ಪ್ರೌಢಗ್ರಂಥವನ್ನು ರಚಿಸಿದರೆಂಬುದನ್ನಿಲ್ಲಿ ಸ್ಮರಿಸಿ ಕೊಳ್ಳಬಹುದು. ಅವರು ಕಾಶೀಕ್ಷೇತ್ರದಲ್ಲಿ ಶ್ರೀ ಸ್ವಪ್ರಕಾಶಯತಿಗಳೆಂಬ ವಿದ್ವಾಂಸ-ರೊಡನೆ ವಾದಮಾಡಿ ಅವರನ್ನು ಪರಾಜಯಗೊಳಿಸಿದ್ದರಂತೆ. ಈ ಪರಂಪರೆ-ಯಲ್ಲಿಯೇ ಶ್ರೀಗುರು ಪೀಠದಲ್ಲಿ ವಿರಾಜಮಾನರಾದವರು ಶ್ರೀ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳು. ಇವರು ದೊಡ್ಡವಿದ್ವಾಂಸರೂ ತಪೋನಿಷ್ಠರೂ ಆಗಿ ವಿಖ್ಯಾತರಾದ ಮಹಾಮಹಿಮರು. ಈ ಮಹಾಸ್ವಾಮಿಗಳ ಕರಕಮಲ ಸಂಜಾತರಾಗಿ ಈಗ ಶ್ರೀ ಸ್ವರ್ಣವಲ್ಲೀ ಜಗದ್ಗುರು ಪೀಠಾಧಿಷ್ಠಿತರಾಗಿರತಕ್ಕವರೇ ನಮ್ಮೆಲ್ಲರ ಗೌರವಕ್ಕೆ ಪಾತ್ರರಾದ ಪರಮಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು.

ಶ್ರೀ ಶ್ರೀಗಳವರು ಬಾಲ್ಯದಲ್ಲಿಯೇ ಕಾಲೋಚಿತವಾದ ವೇದಾಧ್ಯಯನವನ್ನು ಮಾಡಿ ಆಚಾರನಿಷ್ಠರಾಗಿದ್ದರು. ಸಂಸ್ಕೃತಪಾಠಶಾಲೆಯಲ್ಲಿ ಕಾವ್ಯ-ವ್ಯಾಕರಣಾದಿ-ಗಳನ್ನು ಅಭ್ಯಾಸಮಾಡಿ ಪ್ರೌಢವಿದ್ಯಾಭ್ಯಾಸಕ್ಕಾಗಿ ಮೈಸೂರು ನಗರಕ್ಕೆ ಹೋಗಿ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯನ್ನು ಸೇರಿದರು. ಅವರ ಚಿತ್ತವೃತ್ತಿಯು ವೇದಾಂತದ ಕಡೆಗೆ ಒಲಿದದ್ದರಿಂದ ಆ ಮಹಾಪಾಠಶಾಲೆಯಲ್ಲಿ ಅದ್ವೈತವೇದಾಂತ ಶಾಸ್ತ್ರವನ್ನು ಆರಿಸಿಕೊಂಡರು. ವಿಖ್ಯಾತವಿದ್ವಾಂಸರಾಗಿದ್ದ ವಿದ್ವಾನ್ ಕೆ. ರಾಮಚಂದ್ರ ಸೋಮಯಾಜಿಗಳು ವೇದಾಂತದ ಪ್ರಾಧ್ಯಾಪಕ-ರಾಗಿದ್ದರು. ಅವರು ನಿವೃತ್ತರಾದ ಮೇಲೆ ಅವರ ಸ್ಥಾನವನ್ನೇರಿದ ವೇ.ಬ್ರ. ವಿದ್ವಾನ್ ನಾರಾಯಣಭಟ್ಟರ ಸಾಂನಿಧ್ಯದಲ್ಲಿ ವೇದಾಂತದ ಪ್ರೌಢಾಧ್ಯಯನವು ಸಾಗಿತು. ವೇ.ಬ್ರ. ನಾರಾಯಣಭಟ್ಟರು ತರ್ಕವೇದಾಂತಗಳೆರಡರಲ್ಲೂ ಅದ್ವಿತೀಯ

ಪಾಂಡಿತ್ಯವನ್ನು ಗಳಿಸಿದವರು. ಅವರಿಂದ ವೇದಾಂತದಲ್ಲಿ ಉತ್ತಮ ವೈದುಷ್ಯವನ್ನು ಗಳಿಸಿ ವಿದ್ವದುತ್ತಮಪರೀಕ್ಷೆಯಲ್ಲಿ ಪ್ರಥಮ ಕಕ್ಷ್ಯೆಯನ್ನಡರಿ ತೇರ್ಗಡೆಯಾದರಲ್ಲದೆ, ಆ ವರ್ಷದಲ್ಲಿ ''ಸರ್ವಪ್ರಾವೀಣ್ಯ''ವನ್ನು ಪಡೆದರು. ಶ್ರೀ ಶ್ರೀಗಳವರ ಪ್ರತಿಭಾಶಕ್ತಿಗೆ ಇದೊಂದು ನಿದರ್ಶನ.

ಎಲ್ಲ ಶಾಸ್ತ್ರಗಳ ಅಧ್ಯಯನಕ್ಕೂ ನ್ಯಾಯಶಾಸ್ತ್ರವು ತುಂಬ ಉಪಕಾರಿಯಾದದ್ದು. ಈ ರಹಸ್ಯವನ್ನರಿತಿದ್ದ ಶ್ರೀ ಶ್ರೀಗಳವರು ಮೈಸೂರಿನಲ್ಲಿ ವಿದ್ಯಾರ್ಥಿಯಾಗಿ-ದ್ದಾಗಲೇ, ನ್ಯಾಯಶಾಸ್ತ್ರದಲ್ಲಿ ವಿಶಿಷ್ಟಜ್ಞಾನವನ್ನು ಸಂಪಾದಿಸಬೇಕೆಂದು ಬಯಸಿದರು. ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಸಂಶೋಧಕರೂ ಸುಪ್ರಸಿದ್ಧ ನ್ಯಾಯವಿದ್ವಾಂಸರೂ ಆದ ವೇ.ಬ್ರ. ವಿದ್ವಾನ್ ಕೆ.ಎಸ್. ವರದಾಚಾರ್ಯರ ಬಳಿ ಖಾಸಗಿಯಾಗಿ ನ್ಯಾಯಶಾಸ್ತ್ರಾಧ್ಯಯನವನ್ನು ಕೈಗೊಂಡರು. ವೇ.ಬ್ರ. ಕೆ.ಎಸ್. ವರದಾಚಾರ್ಯರು ಅತ್ಯಂತ ಉದಾರಪ್ರವೃತ್ತಿಯವರೂ ವಿದ್ಯಾಪಕ್ಷಪಾತಿಗಳೂ ಆದ್ದರಿಂದ ಈ ಶಿಷ್ಯನ ಜ್ಞಾನಾರ್ಜನೆಯ ಕುತೂಹಲವನ್ನೇ ಗಮನಿಸಿ, ಆಸಕ್ತಿಯನ್ನು ತಳೆದು ನ್ಯಾಯಶಾಸ್ತ್ರವನ್ನಿವರಿಗೆ ಬೋಧಿಸಿದರು.

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀಸ್ವಾಮಿಗಳು ಶ್ರೀಮಠದಲ್ಲಿ ಸಂನ್ಯಾಸ ದೀಕ್ಷೆಯನ್ನವಲಂಬಿಸಿದ ಮೇಲೆಯೂ ಶ್ರೀ ಕೆ.ಎಸ್. ವರದಾಚಾರ್ಯರನ್ನು ತಮ್ಮ ಮಠಕ್ಕೆ ಕರೆಸಿಕೊಂಡು ತಮ್ಮ ಶಾಸ್ತ್ರಾಧ್ಯಯನವನ್ನು ಮುಂದುವರಿಸಿದರು. ಶ್ರೀ ಶ್ರೀಗಳವರ ವಿದ್ಯಾರ್ಜನೆಯ ಪರಮಾಸಕ್ತಿಗೂ ಶ್ರೀ ವರದಾಚಾರ್ಯರ ಶ್ರೇಷ್ಠವಾದ ವೈದುಷ್ಯ ಶಿಷ್ಯವಾತ್ಸಲ್ಯಗಳಿಗೂ ಇದೊಂದು ನಿದರ್ಶನವಾಗಿ ನಿಲ್ಲುತ್ತದೆ.

ವೇದಾಂತ, ತರ್ಕಶಾಸ್ತ್ರಗಳೆರಡು ವಶವಾದಾಗ ಸಾಂಖ್ಯ, ವ್ಯಾಕರಣಾದಿ ಶಾಸ್ತ್ರಗಳ ಅಧ್ಯಯನವು ಸುಗಮವಾಗುತ್ತದೆ. ಕ್ರಮವಾಗಿ ಶ್ರೀ ಶ್ರೀಗಳವರು ಇತರ ಶಾಸ್ತ್ರಗಳನ್ನೂ, ಅಧ್ಯಯನ ಮಾಡಿ ಅವುಗಳಲ್ಲಿ ಗಣನೀಯವಾದ ಪಾಂಡಿತ್ಯವನ್ನು ಗಳಿಸಿಕೊಂಡಿದ್ದಾರೆ. ಶ್ರೀಮಠದಲ್ಲಿ ಶ್ರೀಚಕ್ರಾರ್ಚನೆಯು ಪ್ರಧಾನವಾಗಿ ನಡೆಯುತ್ತಾ ಬಂದಿದೆ. ಶ್ರೀ ಶ್ರೀಗಳವರು ಶ್ರೀ ವಿದ್ಯಾರ್ಚನೆಯಲ್ಲಿ ಅಧಿಕವಾದ ಜ್ಞಾನವನ್ನು ಪಡೆಯಬೇಕೆಂದು, ವೇ.ಬ್ರ. ವಿದ್ವಾನ್ ಕೆ.ಪಿ. ಶಂಕರ ಶಾಸ್ತ್ರಿಗಳನ್ನು ಕರೆಸಿಕೊಂಡು ಅವರಿಂದ ಶ್ರೀ ವಿದ್ಯಾರಹಸ್ಯವನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ.

ಜ್ಞಾನಾರ್ಜನೆಯಲ್ಲಿ ಆಸಕ್ತಿಯು ಬೆಳೆಯಿತೆಂದರೆ ಅದು ವಿರಮಿಸುವ ಪ್ರಸಂಗವೇ ಬರುವುದಿಲ್ಲ. ಅದರಲ್ಲಿಯೂ ಬಹುಮಂದಿ ಶಿಷ್ಯರನ್ನೊಳಗೊಂಡು ಎಲ್ಲ ಜನತೆಯ ಗೌರವಕ್ಕೆ ಪಾತ್ರವಾದ ಶ್ರೀಗುರುಪೀಠದ ಅಧ್ಯಕ್ಷತೆಯು ಪ್ರಾಪ್ತವಾದಾಗ

ವಿದ್ಯಾಭಿಮಾನವು ಬಹುಮುಖವಾಗಿ ಹರಡಿ ವಿಸ್ತೃತವಾಗಿ ಬೆಳೆಯಲಾರಂಭಿಸುತ್ತದೆ. ಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರಸರಸ್ವತೀ ಮಹಾಸ್ವಾಮಿಗಳು ಈ ದಿಶೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಕೈಗೊಂಡರು. ಅಲ್ಲದೆ ಸಮಾಜದ ಎಲ್ಲ ವರ್ಗದವರ ಹಿತಕ್ಕಾಗಿ, ಅವರಲ್ಲಿ ಧರ್ಮನಿಷ್ಠೆಯನ್ನು ಬೆಳೆಸುವುದಕ್ಕಾಗಿ, ವೈದಿಕ ಸಂಸ್ಕೃತಿಯನ್ನು ಎಂದರೆ ಭಾರತೀಯ ಸಂಸ್ಕೃತಿಯನ್ನು ಉಳಿಸುವುದಕ್ಕಾಗಿ ಬೆಳೆಸುವುದಕ್ಕಾಗಿ ಮಾರ್ಗೋಪಾಯಗಳನ್ನು ಚಿಂತಿಸಿ, ನೂತನ ವೇದಿಕೆಗಳ ಮೂಲಕ ಆಚರಣೆಗೆ ತರುತ್ತಲೇ ಇದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾವಿಸಿದೆ.

## 1. ಶಾಸ್ತ್ರಾಧ್ಯಯನ ಗೋಷ್ಠೀ

ಶ್ರೀ ಸೋಂದಾಸ್ವರ್ಣವಲ್ಲೀ ಮಹಾಸಂಸ್ಥಾನವು ಪ್ರತಿವರ್ಷವೂ ಶ್ರೀಮಠದಲ್ಲಿ ಮೇಲ್ಕಂಡ ಗೋಷ್ಠಿಯನ್ನು ನಡೆಸುತ್ತಿದೆ. ವಿವಿಧ ಶಾಸ್ತ್ರಗಳಲ್ಲಿ ಖ್ಯಾತರಾದ ವಿದ್ವಾಂಸರನ್ನು ಆಹ್ವಾನಿಸಿ, ವಿಭಿನ್ನ ಶಾಸ್ತ್ರಗಳಲ್ಲಿ ಶಾಸ್ತ್ರೀಯ ಚಿಂತನಗಳನ್ನು ನಡೆಸಲಾಗುವುದು. ಸೌಕರ್ಯವನ್ನನುಸರಿಸಿ ಸುಮಾರು ಒಂದು ವಾರ ಪರ್ಯಂತ ಈ ಗೋಷ್ಠಿ ನಡೆಯುತ್ತದೆ. ವ್ಯಾಕರಣ, ತರ್ಕ, ಪೂರ್ವಮೀಮಾಂಸಾ, ಧರ್ಮಶಾಸ್ತ್ರ ಸಾಂಖ್ಯ, ಜ್ಯೌತಿಷ, ಅಲಂಕಾರ, ವೇದಾಂತ -ಇವು ವಿಚಾರಕ್ಕೊಳಗಾಗುವ ಶಾಸ್ತ್ರಗಳು. ಇವುಗಳಲ್ಲಿ (ಅದ್ವೈತ)ವೇದಾಂತಕ್ಕೆ ಅಧಿಕವಾದ ಪ್ರಾಧಾನ್ಯವು ಸಹಜವಾಗಿ ಸಲ್ಲುತ್ತದೆ.

ಇದು ವಾದಗೋಷ್ಠಿಯಲ್ಲ. ಅನ್ಯತ್ರ ನಡೆಯುವ ವಾದಗೋಷ್ಠಿಗಳು ವಾದದಲ್ಲಿಯೇ ಮುಕ್ತಾಯವಾಗುವುದರಿಂದಲೂ ಯಾವುದೇ ಒಂದು ವಿಚಾರವೂ ಉಚಿತರೀತಿಯಲ್ಲಿ ಚರ್ಚಿತವಾಗದಿರುವುದರಿಂದಲೂ ಶ್ರೀ ಶ್ರೀಗಳವರು ಒಂದು ನೂತನಮಾರ್ಗದಲ್ಲಿ ಶಾಸ್ತ್ರಾಧ್ಯಯನಗೋಷ್ಠಿಗಳನ್ನು ನಡೆಸುತ್ತಿದ್ದಾರೆ. ಗೊತ್ತಾದ ವಿಷಯದ ಮೇಲೆ ವಿದ್ವಾಂಸರು ಪ್ರೌಢಪ್ರಬಂಧಗಳನ್ನು ಬರೆದುತಂದು ಓದುತ್ತಾರೆ. ಅದರ ಮೇಲೆ ಚಿಂತನ ನಡೆಯುತ್ತದೆ. ಈ ಕ್ರಮದಲ್ಲಿಯೂ ವಾದವು ಬೆಳೆಯ-ಬಹುದು. ಅದು ವಸ್ತುನಿಷ್ಠವಾಗುವುದರಿಂದ ಎಲ್ಲ ವಿದ್ವಾಂಸರೂ ಸೇರಿ ಆ ವಿಷಯದಲ್ಲಿ 'ಇದಮಿತ್ಥಂ' ಎಂಬ ಒಂದು ನಿರ್ಣಯಕ್ಕೆ ಬರಲು ಸಾಧ್ಯವಾಗುತ್ತದೆ. ಇದು ವಿದ್ವಜ್ಜನರಿಗೂ ಸ್ವಬುದ್ಧಿ ಪರಿಶುದ್ಧಿಗೆ ಅತ್ಯಂತ ಉಪಯುಕ್ತವಾಗುತ್ತದೆ. ಅಲ್ಲದೆ ಈ ಕ್ರಮದಲ್ಲಿ ಪಾಂಡಿತ್ಯದ ಮೆರವಣಿಗೆಯಾಗಲಿ ಅನ್ಯರ ತೇಜೋವಧ ಪ್ರಸಂಗವಾಗಲಿ ಇರುವುದಿಲ್ಲ. ಪಂಡಿತಜನರಿಗೆ ಮತ್ತು ಜಿಜ್ಞಾಸುಗಳಿಗೆ ಅತ್ಯಂತ ಪ್ರಯೋಜನಕಾರಿಯಾದ ವಿಧಾನವಿದು.

ಈ ಗೋಷ್ಠಿಗೆ ಬರುವ ಎಲ್ಲ ವಿದ್ವಾಂಸರಿಗೂ ಪ್ರಶಂಸನೀಯವಾದ ರೀತಿಯಲ್ಲಿ ವಸತಿಭೋಜನಾದಿ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗುವುದು. ಅನಂತರ ಭಾಗವಹಿಸಿದ ವಿದ್ವಾಂಸರನ್ನು ಸಮುಚಿತವಾಗಿ ಗೌರವಿಸಿ ಸುವರ್ಣಮಂತ್ರಾಕ್ಷತೆ-ಯನ್ನಿತ್ತು ಕಳಿಸಿಕೊಡಲಾಗುವುದು. ಈ ಗೋಷ್ಠೀವಿಧಾನವು ವಿದ್ವಜ್ಜನಪ್ರಿಯ-ವಾದ್ದರಿಂದ ಪ್ರತಿವರ್ಷವೂ ವರ್ಧಿಸುತ್ತಲೇ ಇದೆ.

## 2. ಸಂಸ್ಕೃತ ಮಹಾವಿದ್ಯಾಲಯ

ಶ್ರೀಮಠದಲ್ಲಿ ಬಹಳ ಹಿಂದಿನಿಂದಲೂ ಒಂದು ಪಾಠಶಾಲೆ ಇದ್ದು ವೇದ ಮತ್ತು ಸಂಸ್ಕೃತವನ್ನು ಕಲಿಸಲಾಗುತ್ತಿತ್ತು. ಅದು ಪ್ರಾಥಮಿಕ ಶಿಕ್ಷಣ. ಈಗ ಶ್ರೀ ಶ್ರೀಗಳವರ ನೇತೃತ್ವದಲ್ಲಿ ಅದು ದೊಡ್ಡದಾಗಿ ಬೆಳೆಯುತ್ತ ಶ್ರೀ ರಾಜರಾಜೇಶ್ವರೀ ಮಹಾವಿದ್ಯಾಲಯವಾಗಿದೆ. ಸರ್ಕಾರದಿಂದ ಮಾನಿತವಾಗಿದೆ. ಅದ್ವೈತವೇದಾಂತ, ಪೂರ್ವಮೀಮಾಂಸಾ, ಜ್ಯೋತಿಷ್ಯ ಶಾಸ್ತ್ರಗಳಲ್ಲಿ ವಿದ್ವದುತ್ತಮ ಪರೀಕ್ಷೆಯವರೆಗೆ ಶಿಕ್ಷಣ ಉಂಟು. ನುರಿತ ಅಧ್ಯಾಪಕರಿದ್ದಾರೆ. ಕಾವ್ಯ ವ್ಯಾಕರಣಗಳಲ್ಲಿ ಸಾಹಿತ್ಯ ಪರೀಕ್ಷೆಯವರೆಗೆ ತರಗತಿಗಳಿವೆ. ಕೃಷ್ಣಯಜುರ್ವೇದವನ್ನು ವಿದ್ವದುತ್ತಮದವರೆಗೆ ಕಲಿಸಲಾಗುತ್ತದೆ.

ವಿದ್ಯಾರ್ಥಿಗಳಿಗೆ ಮಠದಲ್ಲಿಯೇ ವಸತಿಭೋಜನಗಳ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸಿಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಪಾರಿತೋಷಿಕ ಗಳನ್ನಿತ್ತು ಪ್ರೋತ್ಸಾಹಿಸುವುದಕ್ಕಾಗಿ ದತ್ತಿನಿಧಿಯನ್ನು ಸ್ಥಾಪಿಸಿದ್ದಾರೆ. ಇದೆಲ್ಲವೂ ಸರ್ವತೋಮುಖವಾಗಿ ಬೆಳೆಯುತ್ತಿದೆ.

3. ಶ್ರೀಮಠದ ಆಶ್ರಯದಲ್ಲಿ 'ಸ್ವರ್ಣವಲ್ಲೀ ಪ್ರಭಾ' ಎಂಬ ಮಾಸಿಕಪತ್ರಿಕೆ-ಯನ್ನು ಪ್ರಕಟಿಸಲಾಗುತ್ತಿದೆ. ಶ್ರೀ ಶ್ರೀಗಳವರೇ ಈ ಪತ್ರಿಕೆಯ ಸಂಸ್ಥಾಪಕರೂ ಮಹಾಪೋಷಕರೂ ಪ್ರೇರಕರೂ ಆಗಿದ್ದಾರೆ. ಈ ಪತ್ರಿಕೆಯಲ್ಲಿ ಹಲವು ಬಗೆಯ ಧಾರ್ಮಿಕ ಲೇಖನಗಳನ್ನೂ ಶಾಸ್ತ್ರವಿಚಾರಗಳನ್ನೂ ಒಳಗೊಂಡ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ಇದು ಕನ್ನಡಭಾಷೆಯಲ್ಲಿರುವುದರಿಂದ ಎಲ್ಲ ಕನ್ನಡಿಗರಿಗೂ ಉಪಯುಕ್ತವಾಗಿದೆ. ಮಠದಲ್ಲಿ ನಡೆಯುವ ಕಾರ್ಯಕ್ರಮಗಳ ಪರಿಚಯವೂ ಇದರಲ್ಲಿ ದೊರೆಯುತ್ತದೆ. ಈ ಪತ್ರಿಕೆಯು ಲೋಕಪ್ರಿಯವಾಗಿ ಚಂದಾದಾರರನ್ನು ಬೆಳೆಸಿಕೊಂಡು ಅಭಿವೃದ್ಧಿಪಥದಲ್ಲಿ ಸಾಗುತ್ತಿದೆ.

## 4. ಉಪನಯನ

ಷೋಡಶಸಂಸ್ಕಾರಗಳಲ್ಲಿ ಉಪನಯನವು ಬ್ರಾಹ್ಮಣ ಬಾಲಕನಿಗೆ ಶ್ರೇಷ್ಠವಾದ ಸಂಸ್ಕಾರ. ಇದರಿಂದಲೇ ಆತನಿಗೆ ದ್ವಿಜತ್ತ್ವವು ಸಿದ್ಧಿಸುತ್ತದೆ. ಈ ಸಂಸ್ಕಾರವು

ಶಾಸ್ತ್ರೋಕ್ತವಿಧಿಪೂರ್ವಕವಾಗಿ ನಡೆಯಬೇಕು. ಮತ್ತು ವಿಹಿತಕಾಲದಲ್ಲಿ ಆಗಬೇಕು. ಈ ವಿಷಯದಲ್ಲಿ ಮಾತಾಪಿತೃಗಳ ಗಮನವನ್ನು ಸೆಳೆಯುವುದಕ್ಕಾಗಿಯೂ ವಿಧಿವತ್ತಾಗಿ ಮಕ್ಕಳಿಗೆ ಉಪನಯನವನ್ನು ನೆರವೇರಿಸುವ ಸಾಮರ್ಥ್ಯವಿಲ್ಲದವರ ಸೌಕರ್ಯ-ಕ್ಕಾಗಿಯೂ ಶ್ರೀಮಠದಲ್ಲಿ ಧರ್ಮೋಪನಯನಗಳನ್ನು ನಡೆಸುವ ಕಾರ್ಯಕ್ರಮವನ್ನು ಶ್ರೀ ಶ್ರೀಗಳವರು ಆರಂಭಿಸಿದ್ದಾರೆ. ಇದು ಯಾವದಿನ ನಡೆಯುವುದೆಂಬುದನ್ನು ಸಾಕಷ್ಟು ಪೂರ್ವದಲ್ಲಿಯೇ ಪ್ರಕಟಿಸಲಾಗುತ್ತದೆ. ಈ ವ್ಯವಸ್ಥೆಯಿಂದ ಬಹಳ ಕುಟುಂಬಗಳಿಗೆ ತುಂಬ ಉಪಕಾರವಾಗುತ್ತಿದೆ.

ಅಲ್ಲದೆ ಉಪನೀತರಾದ ವಟುಗಳು ಸಂಧ್ಯಾವಂದನೆಯನ್ನು ಪ್ರತಿದಿನವೂ ತಪ್ಪದೆ ಆಚರಿಸುವಂತೆ ತಿಳಿವಳಿಕೆಯನ್ನು ಸಂಧ್ಯಾಚರಣೆಯ ಪ್ರಯೋಜನಗಳನ್ನು ಬೋಧಿಸುತ್ತಾರೆ. ವಿಭಿನ್ನ ಶಾಲೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗಾಗಿ ಬೇಸಿಗೆ ರಜಾಕಾಲದಲ್ಲಿ ವೇದಾಧ್ಯಯನ ಶಿಬಿರವನ್ನೇರ್ಪಡಿಸುತ್ತಿದ್ದಾರೆ. ಆ ಸಮಯ-ದಲ್ಲಿ ಬರುವ ವಿದ್ಯಾರ್ಥಿಗಳಿಗೆ ಉಚಿತವಾದ ವಸತಿಭೋಜನಗಳ ವ್ಯವಸ್ಥೆ ಇದೆ. ಕಾಲೋಚಿತವಾಗಿ ಅತ್ಯಾವಶ್ಯಕವಾದ ವೇದಮಂತ್ರಗಳನ್ನು ಈ ಶಿಬಿರದ ವಿದ್ಯಾರ್ಥಿಗಳಿಗೆ ಕಲಿಸಲಾಗುವುದು. ಮೊದಲನೆಯ ವರ್ಷದಲ್ಲಿ ಕಲಿತವರು ಎರಡನೆಯ ವರ್ಷವೂ ಬಂದು ವೇದಾಧ್ಯಯನವನ್ನು ಮುಂದುವರಿಸಬಹುದು. ಲೌಕಿಕ ವಿದ್ಯಾರ್ಜನೆಯ ಜೊತೆಗೆ ಬ್ರಾಹ್ಮಣ್ಯವನ್ನು ಕಾಪಾಡಿಕೊಳ್ಳಲು ಬೇಕಾದ ವೈದಿಕ ವಿದ್ಯಾರ್ಜನೆಯೂ ಆಗಲೆಂಬ ಉದ್ದೇಶದಿಂದ ನಡೆಯುವ ಪ್ರಶಂಸನೀಯವಾದ ಕಾರ್ಯಕ್ರಮವಿದು. ರಜಾದಿನಗಳಲ್ಲಿ ನಡೆಯುವ ಈ ಶಿಬಿರದಲ್ಲಿ ಭಾರತೀಯ ಸಂಸ್ಕೃತಿಯ ಪರಿಚಯವು ಬಾಲಕರಿಗಾಗಲೆಂಬ ಇನ್ನೊಂದು ಉದ್ದೇಶವೂ ಸೇರಿದೆ. ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ, ವೈದಿಕ ಸಂಸ್ಕಾರಗಳು, ವರ್ಣಾಶ್ರಮಧರ್ಮಗಳು, ನೀತಿ-ನಡವಳಿಕೆ ಮುಂತಾದ ವಿಷಯಗಳಲ್ಲಿ ಉಪನ್ಯಾಸಗಳ ಮೂಲಕ ಸಾಕಷ್ಟು ತಿಳಿವಳಿಕೆಯನ್ನು ನೀಡಲಾಗುವುದು.

## 5. ಬಾಲಿಕಾ ಶಿಕ್ಷಣ ಶಿಬಿರ

ಮೇಲ್ಕಂಡ ಕಾರ್ಯಕ್ರಮವು ಬಾಲಕರಿಗಾಯಿತು. ಬಾಲಿಕೆಯರಿಗೆ ಬಂದ ಲಾಭವೇನು? ಸ್ತ್ರೀಯರು ಸಮಾಜದ ಅರ್ಧಾಂಗವಾಗಿದ್ದಾರೆ. ಭಾರತೀಯ ಸಂಸ್ಕೃತಿಯು, ಬ್ರಾಹ್ಮಣ್ಯವು ನಮ್ಮ ಸಮಾಜದಲ್ಲಿ ಇನ್ನೂ ಜೀವಂತವಾಗಿರುವುದು ಸ್ತ್ರೀಯರಿಂದ ಎಂದರೆ ಅತಿಶಯೋಕ್ತಿಯಾಗದು. ಅದು ಉಳಿಯಬೇಕಾದದ್ದು

ಮುಖ್ಯವಾಗಿ ಸ್ತ್ರೀಯರಿಂದಲೇ. ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಇದನ್ನರಿತು ಬೇಸಿಗೆ ರಜಾದಿನಗಳಲ್ಲಿ ಬಾಲಿಕೆಯರಿಗಾಗಿ ಶಿಕ್ಷಣ ಶಿಬಿರವನ್ನೇರ್ಪಡಿಸುತ್ತಿದ್ದಾರೆ. ವೇದಾಧ್ಯಯನ ಒಂದನ್ನು ಬಿಟ್ಟು ಉಳಿದ ಎಲ್ಲ ಸಾಂಸ್ಕೃತಿಕ ವಿಚಾರಗಳನ್ನೂ ಇಲ್ಲಿ ಬೋಧಿಸಲಾಗುತ್ತದೆ. ಅಲ್ಲದೆ ನಮ್ಮ ಹವ್ಯಕಸಮಾಜದಲ್ಲಿ ಪ್ರಸಿದ್ಧವಾದ ಹಾಡುಗಳನ್ನು ಹೇಳುವುದು, ರಂಗವಲ್ಲಿಯನ್ನು ಹಾಕುವುದು -ಮುಂತಾದ ಕಲೆಗಳು ಕ್ರಮವಾಗಿ ಕುಟುಂಬದಿಂದ ಮರೆಯಾಗುತ್ತಿವೆ. ಈ ವಿಷಯಗಳಲ್ಲಿ ಶಿಬಿರವು ಬಾಲಿಕೆಯರಿಗೆ ಯೋಗ್ಯಶಿಕ್ಷಣವನ್ನೀಯುತ್ತದೆ. ಶ್ರೀ ಶ್ರೀಗಳವರ ಸೂಕ್ಷ್ಮದರ್ಶಿತೆಯನ್ನೂ ಸಮಾಜ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಅವರಿಗಿರುವ ಕಳಕಳಿಯನ್ನೂ ಇದರಿಂದ ಊಹಿಸಿಕೊಳ್ಳಬಹುದು.

### 6. ಅರ್ಚಕರ ಮತ್ತು ಪುರೋಹಿತರ ಸಮವಾಯ

ಇಲ್ಲಿ ಅರ್ಚಕರೆಂದರೆ ದೇವಸ್ಥಾನಗಳಲ್ಲಿ ನಿಯುಕ್ತರಾದ ಅರ್ಚಕರು. ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ದೇವಸ್ಥಾನವು ಇದ್ದೇ ಇರುತ್ತದೆ. ಈ ದೇವಸ್ಥಾನಗಳು ಆಗಮಶಾಸ್ತ್ರದಂತೆ ಪ್ರತಿಷ್ಠಿತವಾಗಿದ್ದು ಆಗಮಶಾಸ್ತ್ರೋಕ್ತ-ವಿಧಿಯಂತೆ ಅರ್ಚನೆಯು ನಡೆಯಬೇಕು. ಶಿವ, ವಿಷ್ಣು, ಗಣಪತಿ, ದೇವಿ, ಆಂಜನೇಯ ದೇವಸ್ಥಾನಗಳು ವಿಶೇಷವಾಗಿ ಕಂಡುಬರುತ್ತವೆ. ಈ ಮೂರ್ತಿಗಳ ಪೂಜಾವಿಧಾನವು ಮನೆಗಳಲ್ಲಿ ನಡೆಯುವ ಪೂಜೆಗಿಂತ ಭಿನ್ನವಾಗಿರುವುದುಂಟು. ಕೆಲವು ಮೂರ್ತಿಗಳಿಗೆ ನಿತ್ಯಾಭಿಷೇಕವಿದೆ, ಕೆಲವಕ್ಕೆ ನಿತ್ಯವೂ ಅಭಿಷೇಕವಿಲ್ಲ. ಈ ಮೂರ್ತಿಗಳಲ್ಲಿ ದೇವತಾವಾಹನೆಯನ್ನು ಪ್ರತಿದಿನ ಮಾಡಬೇಕೆ-ಬೇಡವೆ? ಇತ್ಯಾದಿ ಪ್ರಶ್ನೆಗಳು ಹುಟ್ಟುತ್ತವೆ. ಅಲ್ಲದೆ ಅಷ್ಟಬಂಧ, ಕುಂಭಾಭಿಷೇಕ -ಮುಂತಾದವುಗಳ ವಿಷಯದಲ್ಲಿ ಅರ್ಚಕರಿಗೆ ಸ್ಪಷ್ಟವಾದ ತಿಳಿವಳಿಕೆ ಬೇಕು.

ಪುರೋಹಿತನೆಂದರೆ ಧಾರ್ಮಿಕವಿಷಯಗಳಲ್ಲಿ ಶಿಷ್ಯರ ಮುಂದೆ ನಿಂತು ಮಾರ್ಗದರ್ಶನ ಮಾಡತಕ್ಕವನು, ಶಿಷ್ಯರ ಹಿತವನ್ನು ಬಯಸತಕ್ಕವನು ಎಂದು ಶಬ್ದಾರ್ಥ. ಇದರಿಂದ ಪುರೋಹಿತರಿಗಿರುವ ಜವಾಬ್ದಾರಿ ಎಷ್ಟೆಂಬುದು ವ್ಯಕ್ತವಾಗುತ್ತದೆ. ಶಿಷ್ಯರಾದ ತಾರ್ಕಿಕರಿಗೆ ಈ ಕಾಲದಲ್ಲಿ ಪ್ರಾಯೇಣ ಧಾರ್ಮಿಕವಿಚಾರದಲ್ಲಿ ಏನೂ ಗೊತ್ತಿರುವುದಿಲ್ಲ. ಸಮಯೋಚಿತವಾಗಿ ಅದನ್ನು ಈ ಲೌಕಿಕಜನರಿಗೆ ತಿಳಿಸುವುದು ಪುರೋಹಿತರ ಕರ್ತವ್ಯವಾಗಿರುತ್ತದೆ. ಮತ್ತು ಪುರೋಹಿತರ ಆಚಾರಣೆಗಳಲ್ಲಿಯೂ ಕೆಲವು ದೋಷಗಳು ಸೇರಿಕೊಂಡಿರುತ್ತವೆ. ಅಂತೆಯೇ ಅರ್ಚಕರಿಗೂ ಪುರೋಹಿತರಿಗೂ ಒದಗುವ ಕೆಲವು ಕ್ಲೇಶಗಳೂ

ಸಮಸ್ಯೆಗಳೂ ಉಂಟು. ಈ ಕಾರಣಗಳಿಂದ ಆಗಾಗ ಒಂದು ಗೋಷ್ಠಿಯನ್ನೇರ್ಪಡಿಸಿ, ಚರ್ಚಿಸಿ ಒಂದು ನಿರ್ಣಯಕ್ಕೆ ಬರುವುದು. ಈ ಸಮವಾಯದ ಉದ್ದೇಶವಾಗಿರುತ್ತದೆ. ಇದೊಂದು ಅತ್ಯಾವಶ್ಯಕವಾದ ಕಾರ್ಯಕ್ರಮ.

ಈ ಪ್ರಕಾರದಲ್ಲಿ ಶ್ರೀ ಶ್ರೀಗಳವರು ಸಮಾಜಕಲ್ಯಾಣಕ್ಕಾಗಿ ಯೋಜಿಸಿದ ವಿಧಾನಗಳು ಬಹುಮುಖವಾದವು. ಗಾಯತ್ರೀಮಂತ್ರವು ಬ್ರಾಹ್ಮಣ್ಯದ ಆತ್ಮವಾಗಿರುತ್ತದೆ. ಇದರ ಮಹತ್ತ್ವದ ಅರಿವನ್ನು ಮೂಡಿಸುವುದಕ್ಕಾಗಿ ಕೋಟಿ ಗಾಯತ್ರೀಜಪವಿಧಿಯನ್ನು ಯೋಜಿಸಿ, ಹಳ್ಳಿಹಳ್ಳಿಗಳಲ್ಲಿಯೂ ಜಪ ಮಾಡಿಸಿ ಒಂದು ಜಪಯಜ್ಞವನ್ನು ಮಠದಲ್ಲಿ ಯಶಸ್ವಿಯಾಗಿ ನೆರವೇರಿಸಿದರು. 'ಶ್ರೀ ಗಾಯತ್ರೀ ಜಪಯಜ್ಞ'ವೆಂಬ ಪುಸ್ತಕವನ್ನು ರಚಿಸಿ ಹಂಚಿದ್ದಾರೆ. ಹೆಣ್ಣುಮಕ್ಕಳಿಂದ ಶ್ರೀ ರಾಜರಾಜೇಶ್ವರೀ ದೇವಿಗೆ ಲಕ್ಷಕುಂಕುಮಾರ್ಚನೆಯನ್ನು ಮಾಡಿಸಿದರು. ಕಾರ್ಗಿಲ್‌ಯುದ್ಧಪ್ರಸಂಗದಲ್ಲಿ ಭಾರತದೇಶಕ್ಕೆ ಜಯವಾಗಲೆಂಬ ಸಂಕಲ್ಪವೂ ಇದರ ಜೊತೆಗಿತ್ತು. 'ನಿರ್ವ್ಯಸನ ಸಮಾಜ'ವೆಂಬ ಗುರಿಯನ್ನಿಟ್ಟುಕೊಂಡು ಬೀಡಿ, ಸಿಗರೇಟ್, ಮಧ್ಯಪಾನಾದಿಗಳಲ್ಲಿರುವ ಕೆಡುಕುಗಳನ್ನು ವಿವರಿಸಿ, ಆ ಕೆಟ್ಟ ಚಟಗಳನ್ನು ಬಿಡಿಸುವ ಪ್ರಯತ್ನವು ಪ್ರಶಂಸನೀಯವಾಗಿ ನಡೆದಿದೆ. ಅನೇಕರು ಶ್ರೀಗಳವರ ಬೋಧನೆಯಿಂದ ಆ ಚಟಗಳನ್ನು ತ್ಯಜಿಸಿದ್ದಾರೆ. ಬೇಡ್ತಿ ಸತ್ಯಾಗ್ರಹವು ಸುಪ್ರಸಿದ್ಧವಾಗಿ ಸರ್ಕಾರದ ಮೇಲೆ ಪ್ರಭಾವವನ್ನು ಬೀರಿದೆ. ಬಹುಧನವ್ಯಯದಿಂದ ವಿಸ್ತಾರವಾದ ಗೋಶಾಲೆ, ಭೋಜನಶಾಲೆಗಳ ನಿರ್ಮಾಣವಾದವು.

ವಿದ್ಯಾಪ್ರಸಾರವೇ ಪ್ರಧಾನೋದ್ದೇಶವಾಗಿದ್ದು ಶ್ರೀ ಶ್ರೀಗಳವರ ನೇತೃತ್ವದಲ್ಲಿ ಶ್ರೀರಾಜರಾಜೇಶ್ವರೀ ಮಹಾಪಾಠಶಾಲೆಗೆ ನೂತನ ಚೈತನ್ಯವು ಪ್ರಾಪ್ತವಾಯಿತು. ವಿವಿಧ ಶಾಸ್ತ್ರಗಳ ಮತ್ತು ವೇದದ ಅಧ್ಯಯನಕ್ಕೆ ಪುಷ್ಟಿಯುಂಟಾಗಿದೆ. ಸಂಸ್ಕೃತಭಾಷೆಯ ಕಠಿಣವಾದ್ದಲ್ಲ, ಎಲ್ಲರಿಗೂ ಇದರಲ್ಲಿ ಸಾಕಷ್ಟು ಜ್ಞಾನವಿರಲೇಬೇಕೆಂಬ ಧ್ಯೇಯದಿಂದ ಪ್ರತಿವರ್ಷವೂ ಅಲ್ಲಲ್ಲಿ ಸಂಭಾಷಣ ಶಿಬಿರಗಳನ್ನು ನಡೆಸುತ್ತಿದ್ದಾರೆ. ಅಪೂರ್ವಗ್ರಂಥಗಳ ಮುದ್ರಣಕಾರ್ಯಕ್ರಮವೂ ನಡೆಯುತ್ತಿದೆ.

ಹೀಗೆ ಶ್ರೀ ಶ್ರೀಗಳವರು ಅನವರತವೂ ವಿದ್ಯಾಪ್ರಸಾರಕ್ಕಾಗಿ ಸಮಾಜದ ಕಲ್ಯಾಣಕ್ಕಾಗಿ ದುಡಿಯುತ್ತಲೇ ಇದ್ದಾರೆ. ಇದು ಸಮೀಚೀನವಾದ ವಿದ್ಯಾರ್ಜನೆಯ ಫಲ. ವಿದ್ವಾಂಸನು ಯಥಾಶಕ್ತಿಯಾಗಿ ಜನಕಲ್ಯಾಣಕ್ಕಾಗಿ ಪ್ರಯತ್ನಿಸದಿದ್ದರೆ, ಆ ಕಾರ್ಯವನ್ನು ನಡೆಸತಕ್ಕವರು ಯಾರು? ಶ್ರೀಶಂಕರಭಗವತ್ಪಾದರು ಮಠವೆಂಬ ಸಂಸ್ಥೆಯನ್ನು ನಿರ್ಮಿಸಿರುವುದೇ ಧರ್ಮದ ರಕ್ಷಣೆಗಾಗಿ. ಧರ್ಮದ ವಿಶಾಲಾರ್ಥವನ್ನು ಜನತೆಯು ಅರಿತುಕೊಂಡಾಗ, ಜನತೆಯ ಕಲ್ಯಾಣವು ಸ್ವತಃ ಸಿದ್ಧವಾಗಿ

ಬಿಡುತ್ತದೆ. ಇದನ್ನು ಮನಗಾಣಿಸುವುದಕ್ಕಾಗಿ ಶ್ರೀಗಳವರು ಸತತವೂ ಉದ್ಯುಕ್ತ-ರಾಗಿದ್ದಾರೆ.

ಈ ಕಾರಣಗಳಿಂದ ಶಿಷ್ಯವೃಂದದವರಿಗೆ ಶ್ರೀಗಂಗಾಧರೇಂದ್ರ ಮಹಾಸ್ವಾಮಿಗಳ ವಿಷಯವಾಗಿ ಅಪಾರವಾದ ಭಕ್ತಿವಿಶ್ವಾಸ ಗೌರವಗಳು ದಿನದಿನಕ್ಕೂ ವೃದ್ಧಿ ಹೊಂದುತ್ತಲೇ ಇವೆ. ಶ್ರೀಮಠಕ್ಕೆ ಸಲ್ಲಿಸುವ ಕಾಣಿಕೆಯು, ಒಂದಕ್ಕೆ ನೂರರಷ್ಟು ಫಲವನ್ನು ನೀಡುತ್ತದೆಯೆಂಬುದನ್ನು ಶಿಷ್ಯವೃಂದವು ಕಂಡುಕೊಂಡಿರುವುದರಿಂದ ಶ್ರೀ ಶ್ರೀಗಳವರ ಕಾರ್ಯಯೋಜನೆಗೆ ಧನದ ಕೊರತೆಯಾಗಲೇ ಇಲ್ಲ.

''ಸಹಸ್ರಗುಣಮುತ್ಸ್ರಷ್ಟುಮಾದತ್ತೇ ಹಿ ರಸಂ ರವಿಃ'' -ಎಂಬ ಕಾಳಿದಾಸ ಮಹಾಕವಿಯ ಉದ್ಗಾರವು ಇಲ್ಲಿ ಯಥಾರ್ಥವಾಗಿದೆ. ಸೂರ್ಯನು ಸಮುದ್ರದಿಂದ ಹೀರಿಕೊಳ್ಳುವ ನೀರು ತನಗಾಗಿ ಅಲ್ಲ. ದೇಶದೇಶದಲ್ಲಿ ಸಾವಿರ ಪಟ್ಟಾಗಿ ಮಳೆ ಸುರಿಸುವುದಕ್ಕೋಸ್ಕರ ಆ ನೀರು.

ವಿಗಲಿತಭವಬಂಧಂ ಜ್ಞಾತವೇದಾಂತಸಾರಂ
ಜನಹಿತಕೃತಿದಕ್ಷಂ ದೀಪ್ತಿಮಂತಂಯುವಾನಮ್,
ಯತಿವರಮನುವೀಕ್ಷ್ಯ ಸ್ವರ್ಣವಲ್ಲೀ ಮಠೇಶಂ
ಸ್ಮರತಿ ಸಪದಿ ಚಿತ್ತಂ ಶಂಕರಾಚಾರ್ಯಮಾದ್ಯಮ್ ॥

ಶ್ರೀಮಚ್ಛಂಕರದೇಶಿಕೇಂದ್ರ ಕೃಪಯಾ ಸಂಸ್ಥಾಪಿತೇ ಶ್ರೀಮಠೇ
ರಾಜಂತಂ ಯಶಸೋಜ್ವಲೇನ ತಪಸಾ ಶಾಂತಂ ಮಹಾಂತಂ ಗುರುಮ್ ।
ಶ್ರೀಗಂಗಾಧರವಾಮಪಾರ್ಶ್ವವಿಲಸತ್‌ಸ್ವರ್ಣಪ್ರಭಾಭಾಸ್ವರಂ
ಜ್ಯೋತಿಃ ಕಿಂಚನ ಪಾಲಯತ್ವವಿರತಂ ಕಾರುಣ್ಯಪೂರ್ಣೇಕ್ಷಣಮ್ ॥

ಸೋಂದಾ ಶ್ರೀಸ್ವರ್ಣವಲ್ಲೀ ಪ್ರಯತಮಠವರಾಧೀಶ್ವರಂ ಧೀನಿವಾಸಂ
ಪ್ರಾಚೀನಾಚಾರ್ಯವರ್ಯೈಃ ಪ್ರಚಿತಶಮಧನೈರ್ದರ್ಶಿತೇ ಶಿಷ್ಟಮಾರ್ಗೇ ।
ಅಧ್ವನ್ಯಂ ಲೋಕಮಾನ್ಯಂ ಶ್ರಿತಹಿತಕರಣೇ ನಿತ್ಯಮುನ್ನಿದ್ರಚಿತ್ತಂ
ದೇವೀ ಗಂಗಾಧರೇಂದ್ರಂ ಗುರುವರಮವತಾದ್ ರಾಜರಾಜೇಶ್ವರೀ ನಃ ॥

✽✽✽

